# ಪೋಷಕರೇ ಗಮನಿಸಿ

## ನಿಮ್ಮ ಮಕ್ಕಳಿಗೆ ಯಾರು ಆದರ್ಶ?



**ಬೆ**ಳೆಯುತ್ತಿರುವ ನಿಮ್ಮ ಮಗ ಅಥವಾ ಮಗಳಿಗೆ ಆದರ್ಶವಾಗಿ ಇರಬೇಕಾದವರು ಯಾರು? ಅವರ ಹೃದಯವನ್ನು ಮುಟ್ಟಿ, ಅವರು ಯಶಸ್ಸು ಮತ್ತು ಆನಂದಗಳನ್ನು ಅರಸಲು, ಪ್ರಾಮಾಣಿಕ ಮಾರ್ಗವನ್ನು ತಳೆಯುವಂತೆ ಅವರನ್ನು ಪ್ರೇರೇಪಿಸಬೇಕಾದವರು ಯಾರು? ಕೆಳಗಿನ ಕೆಲವು ನಿದರ್ಶನಗಳು ಅದಕ್ಕೆ ಉತ್ತರವನ್ನು ಹೇಳುತ್ತವೆ.

**ಸತ್ಯಕಾಮನ ನಿದರ್ಶನ :** ಸತ್ಯಕಾಮನು ಗುರುಕುಲವನ್ನು ಸೇರಬೇಕಾಗಿತ್ತು. ಅದಕ್ಕೆ ಅವನು ತನ್ನ ವಂಶಗೋತ್ರದ ಬಗ್ಗೆ ತಿಳಿದುಕೊಳ್ಳಬೇಕಾಗಿತ್ತು. ತನ್ನ ತಾಯಿಯನ್ನು ಅವನು ಕೇಳಿದ. ಅವನ ತಾಯಿಗೆ ಇನ್ನೂ ಮದುವೆಯಾಗಿರಲಿಲ್ಲ. ಹಾಗಾಗಿ ವಂಶದ ಗೋತ್ರ ಗೊತ್ತಿರಲಿಲ್ಲ. ಆದರೆ ತಾಯಿ ಶಾಂತವಾಗಿ ತನ್ನ ಮಗನಿಗೆ ಹೇಳಿದಳು, "ಮಗೂ, ನಾನು ಯೌವನದಲ್ಲಿರುವಾಗ ನಿನ್ನನ್ನು ಪಡೆದೆ. ನಿನ್ನ ವಂಶದ ಗೋತ್ರ ನನಗೆ ಗೊತ್ತಿಲ್ಲ. ನನ್ನ ಹೆಸರು 'ಜಬಾಲಾ' ಎಂದು. ನಿನ್ನ ಹೆಸರು 'ಸತ್ಯಕಾಮ' ಎಂದು. ಹೀಗಾಗಿ ನಿನ್ನ ಪೂರ್ಣ ಹೆಸರು ಸತ್ಯಕಾಮ  ಜಾಬಾಲಾ. ಇಷ್ಟನ್ನೇ ನಿನ್ನ ಗುರುಗಳಿಗೆ ಹೇಳು." ಗುರುಕುಲಕ್ಕೆ ಸೇರಿಕೊಳ್ಳಲು ಹೋದಾಗ, ಗುರುಗಳಾದ ಹರಿದ್ರುಮತ ಗೌತಮರು, ಸತ್ಯಕಾಮನ ಗೋತ್ರವನ್ನು ಕೇಳಿದರು. ತನ್ನ ತಾಯಿ ಹೇಳಿದ ಮಾತೆಂದು, ಮೇಲಿನದನ್ನೇ ಅವನು ಪುನರುಚ್ಚರಿಸಿದ. ಅವನ ಸತ್ಯನಿಷ್ಠೆಯನ್ನು, ನಿರ್ಭಯತೆಯನ್ನು ಗುರುಗಳು ಮೆಚ್ಚಿದರು, ಈ ಚಿಕ್ಕ ಹುಡುಗನಲ್ಲಿರುವ ಪ್ರಾಮಾಣಿಕತೆಯನ್ನು ಕೊಂಡಾಡಿದರು. ಈ ಗುಣ ಅವನಿಗೆ ಯಾರಿಂದ ಬಂತು? ತಾಯಿಯಿಂದ ಅಲ್ಲವೇ.

**ಶ್ರೀರಾಮಕೃಷ್ಣರ ಮತ್ತು ಶ್ರೀಶಾರದಾ ಮಾತೆಯವರ ನಿದರ್ಶನ :** ಇಂದು ಶ್ರೀರಾಮಕೃಷ್ಣರನ್ನು ಲಕ್ಷಗಟ್ಟಲೆ ಜನ ಆರಾಧಿಸುತ್ತಾರೆ. ಅನೇಕ ಗುಣಗಳನ್ನು ಒಳಗೊಂಡ ಆದರ್ಶಪುರುಷರು ಎಂದು ಕೊಂಡಾಡುತ್ತಾರೆ. ಶ್ರೀರಾಮಕೃಷ್ಣರಲ್ಲಿ ಕಾಣುವ ಸತ್ಯನಿಷ್ಠೆ ಎನ್ನುವುದು ಅವರ ಒಂದು ಅಪೂರ್ವವಾದ ಗುಣ. ಅದನ್ನು ಅವರು ಪಡೆದುಕೊಂಡದ್ದು ತಮ್ಮ ಪೂಜ್ಯ ತಂದೆಯವರಾದ ಖುದಿರಾಮರಿಂದಲೇ. ಶ್ರೀರಾಮಕೃಷ್ಣರು ಹುಟ್ಟುವುದಕ್ಕೆ ಮುಂಚೆ ಖುದಿರಾಮರು ಧೇರೇ ಎಂಬ ಗ್ರಾಮದಲ್ಲಿದ್ದರು. ಅಲ್ಲಿನ ಜಮೀನುದಾರನಾದ ರಾಮಾನಂದ ರಾಯ್, ಅವರನ್ನು ಯಾವುದೋ ಒಂದು ವ್ಯಾಜ್ಯದಲ್ಲಿ ಸುಳ್ಳುಸಾಕ್ಷಿ ಹೇಳುವಂತೆ ಕೇಳಿಕೊಂಡ. ಅದಕ್ಕೆ ಖುದಿರಾಮರು ನಿರಾಕರಿಸಿದರು. ಇದರಿಂದ ಕುಪಿತಗೊಂಡ ಜಮೀನುದಾರ ಅವರ ಮೇಲೆಯೇ ಇನ್ನೊಂದು ಸುಳ್ಳು ದಾವೆ ಹೂಡಿದ. ಅದರಲ್ಲಿ ಗೆದ್ದು, ಅವರ ಜಮೀನನ್ನೇ ಆಕ್ರಮಿಸಿಕೊಂಡುಬಿಟ್ಟ. ಖುದಿರಾಮರು ಆ ಗ್ರಾಮವನ್ನೇ ಬಿಟ್ಟು, ಕಾಮಾರಪುಕುರ ಎನ್ನುವ ಇನ್ನೊಂದು ಗ್ರಾಮಕ್ಕೆ ವಲಸೆ ಹೋಗಬೇಕಾಯಿತು. ಹಾಗೆಯೇ ಶ್ರೀಮಾತೆ ಶಾರದಾದೇವಿಯವರ ಜೀವನದಲ್ಲೂ ಅವರ ತಂದೆಯಾದ ರಾಮಚಂದ್ರ ಮುಖರ್ಜಿ ಒಬ್ಬ ಆದರ್ಶವ್ಯಕ್ತಿಯಾಗಿದ್ದರು. ೧೮೬೪ರಲ್ಲಿ ಬಂಗಾಳದಲ್ಲಿ ದೊಡ್ಡ ಬರ ಬಂದಾಗ, ತಾವು ಶೇಖರಿಸಿದ್ದ ಧಾನ್ಯದಿಂದ ಅಡುಗೆ ಮಾಡಿಸಿ, ಆಹಾರ ಕೇಳಿ ಬಂದವರಿಗೆಲ್ಲ ಉಣಬಡಿಸಿದರು. ಅದನ್ನೇ ತಮ್ಮ ಮನೆಯವರೂ ಉಣ್ಣಬೇಕು ಎಂದು ತಾಕೀತು ಮಾಡಿದರು. ಪುಟ್ಟ ಬಾಲಿಕೆ ಶಾರದಾ, ಎಲೆಯ ಮೇಲೆ ಬಡಿಸಿದ್ದ ಬಿಸಿಯಾಗಿದ್ದ ಆಹಾರವನ್ನು ಬೀಸಣಿಗೆಯಿಂದ ಬೀಸುತ್ತಿದ್ದಳು. ತಂದೆಯ ನಿಸ್ವಾರ್ಥತೆ, ಕರುಣೆ, ಸೇವಾಮನೋಭಾವ – ಈ ಗುಣಗಳು ಮಗಳಲ್ಲೂ ಬೆಳೆದುನಿಂತವು.

**ಪೋಷಕರೇ, ಎಚ್ಚರ :** ತಂದೆತಾಯಿಗಳಾಗಿ ನೀವು ನಿಮ್ಮ ಮಕ್ಕಳಿಗೆ ಸಹಜವಾಗಿಯೇ ಆದರ್ಶವ್ಯಕ್ತಿಗಳಾಗಿರುತ್ತೀರಿ. ಹೀಗಾಗಿ ಆ ರೀತಿ ನಡೆದುಕೊಂಡು, ಮಕ್ಕಳಿಗೆ ದಾರಿದೀಪವಾಗುವ ಜವಾಬ್ದಾರಿ ನಿಮ್ಮ ಮೇಲೆಯೇ ಇದೆ ಎನ್ನುವುದನ್ನು ನೆನಪಿಡಿ. ಮಕ್ಕಳು ಬೆಳೆಯುತ್ತಿರುವಾಗ ನಿಮ್ಮನ್ನೇ ಎಲ್ಲದಕ್ಕೂ ಮಾದರಿಯನ್ನಾಗಿ ಮಾಡಿಕೊಂಡು ಬೆಳೆಯುತ್ತಾರೆ. ಹೀಗಾಗಿ ನಿಮ್ಮ ನಡೆನುಡಿಗಳು, ಹವ್ಯಾಸಗಳು, ಕೋಪ ಮುಂತಾದ ಭಾವೋದ್ರೇಕಗಳು, ಮನೋಭಾವನೆಗಳು – ಇವೆಲ್ಲವೂ ಮಕ್ಕಳ ಚಾರಿತ್ರ್ಯನಿರ್ಮಾಣದಲ್ಲಿ ಗಾಢವಾದ ಪ್ರಭಾವವನ್ನು ಬೀರುತ್ತವೆ. ಅವು ನಿಮ್ಮ ಮಗು ಹೀರಿಕೊಳ್ಳುವ ಮೌಲ್ಯಗಳನ್ನು ನಿರ್ಧರಿಸುತ್ತವೆ.  ಗೊತ್ತಿರಲಿ, ಇಲ್ಲದಿರಲಿ ನಿಮ್ಮ ಆಲೋಚನೆಗಳು, ಮಾತು ಮತ್ತು ಕಾರ್ಯಗಳ ಮೂಲಕ  ನೀವು ನಿಮ್ಮ ಮಕ್ಕಳ ಭವಿಷ್ಯವನ್ನು ರೂಪಿಸುತ್ತಿರುವುದಂತೂ ಖಂಡಿತ.  ಮಕ್ಕಳನ್ನು ಬೆಳೆಸುವುದು ಭಗವಂತ ನಿಮಗೆ ನೀಡಿದ ಅಪೂರ್ವ ಅವಕಾಶವಾಗಿದೆ. ಹಾಗೆಯೇ ಅದೊಂದು ದೊಡ್ಡ ಜವಾಬ್ದಾರಿಯೂ ಆಗಿದೆ.  **ಹೀಗಾಗಿ ಮಕ್ಕಳಿಗೆ ಒಳ್ಳೆಯ ಮಾರ್ಗವನ್ನು ತೋರಲು, ಮೊದಲು ನಾವು ಒಳ್ಳೆಯವರಾಗಿರೋಣ, ಉತ್ತಮ ಬಾಳನ್ನು ನಡೆಸೋಣ.** (ಆಧಾರ)

# ಭಾರತ ಭಾಗ್ಯವಿಧಾತನ ಚೆನ್ನೈ ರಣಕಹಳೆ–೨

ಸ್ವಾಮಿ ವಿವೇಕಾನಂದರು ಚೆನ್ನೈನಲ್ಲಿ ಮಾಡಿದ ನಾಲ್ಕನೆಯ ಭಾಷಣದ ಶೀರ್ಷಿಕೆ **'ಭಾರತದ ಮಹಾಪುರುಷರು'** ಎಂದು. ಈ ಭಾಷಣದ ಪ್ರಾರಂಭದಲ್ಲಿಯೇ ಸ್ವಾಮೀಜಿ ಕೇಳುತ್ತಾರೆ, "ಭಾರತದಲ್ಲಿ ಮಹಾಪುರುಷರ ಸಂಖ್ಯೆಗೆ ಮಿತಿ ಇಲ್ಲ. ಮಹಾಪುರುಷರಿಗೆ ಜನ್ಮವನ್ನು ನೀಡುವುದಲ್ಲದೆ, ಹಿಂದೂ ರಾಷ್ಟ್ರವು ಸಾವಿರಾರು ವರುಷಗಳಿಂದ ಮತ್ತೇನನ್ನು ಮಾಡುತ್ತಿದೆ?"

ಭಾರತೀಯ ಶಾಸ್ತ್ರದಲ್ಲಿ 'ಶ್ರುತಿ' ಮತ್ತು 'ಸ್ಮೃತಿ' ಎಂಬ ಎರಡು ಬಗೆಗಳಿವೆ. ಧಾರ್ಮಿಕ ಜೀವನಕ್ಕೆ ಶ್ರುತಿಯ ಉಪದೇಶ ಸಾಕು. ಅವುಗಳಲ್ಲಿ ವಿವರಣೆ ಜಾಸ್ತಿ ಇರಲಿಲ್ಲ. ಅದನ್ನು ಸ್ಮೃತಿಗಳು ಕಾಲಕಾಲಕ್ಕೆ ಒದಗಿಸಿವೆ. ಶ್ರುತಿಯೇ ನಮ್ಮ ಧರ್ಮಕ್ಕೆ ಮೂಲ. ಅಲ್ಲಿ ವ್ಯಕ್ತಿತ್ವ ಗೌಣವಾದುದು. ಅವತಾರಗಳು, ದೇವತೆಗಳು – ಎಲ್ಲ ಬರುವುದು ಸ್ಮೃತಿಗಳಲ್ಲಿ. ನಮ್ಮ ಧರ್ಮವು ವ್ಯಕ್ತಿನಿಷ್ಠವಲ್ಲ, ತತ್ತ್ವನಿಷ್ಠ ಎಂದು ಇದರಿಂದ ಗೊತ್ತಾಗುವುದು. ಈ ಧರ್ಮವು ಸ್ವತಃಸಿದ್ಧವಾದುದು. ಅದು ಯಾವ ತರ್ಕದ ಆಸರೆಯ ಮೇಲೂ ನಿಂತಿಲ್ಲ; ಯಾವ ಮಹಾಪುರುಷರ ಜೀವನದ ಮೇಲೂ ಆಧಾರಿತವಾಗಿಲ್ಲ. ಹೀಗಾಗಿ ಇದೊಂದಕ್ಕೇ ವಿಶ್ವಧರ್ಮವಾಗುವ ಅರ್ಹತೆ ಇದೆ.

ಆದರೂ ಮಹಾಪುರುಷರು, ಅವತಾರಗಳು ಅವಶ್ಯಕ. ಅವರ ಮೂಲಕ ಮಾತ್ರವೇ ಸಾಮಾನ್ಯಜನರು ಭಗವಂತನ ಆರಾಧನೆ ಮಾಡಲು ಸಾಧ್ಯ. ಅಂಥವರು ಆದರ್ಶ ಪುರುಷರು. ಅವರನ್ನು ಜನರು ಅನುಸರಿಸುವರು. ಋಷಿ ಎನ್ನುವ ಪದವು ಈ ಅರ್ಥವನ್ನೇ ಒಳಗೊಂಡಿದೆ. 'ಋಷಿ' ಎಂದರೆ ಮಹಾ ಪ್ರಮಾಣಪುರುಷ ಎಂದರ್ಥ. ಋಷಿ ಎಂದರೆ ಮಂತ್ರದ್ರಷ್ಟ. ವೇದವು ಸಾರುವ ಸಂದೇಶವೆಲ್ಲ ಬಂದದ್ದು ಋಷಿಗಳಿಂದಲೇ. ಈ ಋಷಿತ್ವವು ಯಾವ ಕಾಲಕ್ಕೂ, ದೇಶಕ್ಕೂ, ಲಿಂಗಕ್ಕೂ ಸೀಮಿತವಾಗಿಲ್ಲ. "ನಿಮ್ಮಲ್ಲಿ ಪ್ರತಿಯೊಬ್ಬರೂ ಋಷಿಗಳಾಗಿ, ಆಧ್ಯಾತ್ಮಿಕ ಸತ್ಯಗಳನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವವರೆಗೆ ನಿಮ್ಮ ಪಾಲಿಗೆ ಧಾರ್ಮಿಕ ಜೀವನವು ಇನ್ನೂ ಆರಂಭವಾಗಿಲ್ಲ ಎಂದೇ ಅರ್ಥ" ಎಂದು ಸ್ವಾಮಿ ವಿವೇಕಾನಂದರು ಹೇಳುವರು. ಇಂಥ ಋಷಿತ್ವವೇ ನಮ್ಮ ಧರ್ಮದ ಆದರ್ಶ.

ವೇದಕಾಲೀನ ಋಷಿಗಳ ನಂತರ ಬಂದ ಅತ್ಯಂತ ಆದರಣೀಯ ವ್ಯಕ್ತಿಗಳೆಂದರೆ ರಾಮ ಮತ್ತು ಕೃಷ್ಣ. ರಾಮನು ಆದರ್ಶ ಪುತ್ರ, ಆದರ್ಶ ಪತಿ, ಆದರ್ಶ ತಂದೆ. ಎಲ್ಲಕ್ಕಿಂತ ಹೆಚ್ಚಾಗಿ ಅವನು ಆದರ್ಶರಾಜ. ಸೀತೆಯ ಚಾರಿತ್ರ್ಯವು ಅಸಾಧಾರಣವಾದುದು. ಅವಳು ಸ್ವಯಂಶುದ್ಧತೆಗಿಂತ ಪರಿಶುದ್ಧಳು. ಭರತಖಂಡದಲ್ಲಿ ಆಬಾಲವೃದ್ಧರವರೆಗೆ ಪರಮಪ್ರಿಯನಾದವನು, ಇಷ್ಟದೇವತೆಯಾಗಿರುವವನು ಕೃಷ್ಣ. ಅವನು ಏಕಕಾಲದಲ್ಲಿ ಅಪೂರ್ವ ಸಂನ್ಯಾಸಿ ಮತ್ತು ಅಪೂರ್ವ ಗೃಹಸ್ಥ. ಅವನದು ಅದ್ಭುತ ರಜೋಶಕ್ತಿ, ಹಾಗೆಯೇ ತ್ಯಾಗಶಕ್ತಿ. ಭಗವದ್ಗೀತೆಯನ್ನು ಉಪದೇಶಿಸಿದ ಶ್ರೀಕೃಷ್ಣನು ಆ ಉಪದೇಶದ ಸಾಕಾರಮೂರ್ತಿಯಾಗಿರುವವನು. ಅವನು ಗೀತೆಯ ಸಾರವಾದ ಅನಾಸಕ್ತಿಯೋಗದ ಮೈವೆತ್ತರೂಪದಂತಿರುವವನು. ಕೃಷ್ಣನ ನಂತರ ಸಾಮಾಜಿಕ ವಿಪ್ಲವವನ್ನು ಕಳೆಯಲು ಹುಟ್ಟಿದವನೇ ಗೌತಮ ಶಾಕ್ಯಮುನಿ ಅಥವಾ ಭಗವಾನ್ ಬುದ್ಧದೇವ. ನೀತಿತತ್ತ್ವವನ್ನು ಅವನಷ್ಟು ನಿರ್ಭೀತಿಯಿಂದ ಪ್ರಚಾರ ಮಾಡಿದವನು ಪ್ರಪಂಚದಲ್ಲಿ ಮತ್ತಾರೂ ಇಲ್ಲ. ಅವನು ಕರ್ಮಯೋಗಿಗಳಲ್ಲಿ ಸರ್ವಶ್ರೇಷ್ಠ. ಭಗವದ್ಗೀತೆಯ ಉಪದೇಶಕ್ಕೆ ಸಜೀವ ಉದಾಹರಣೆಯೇ ಭಗವಾನ್ ಬುದ್ಧ ಎಂದು ಸ್ವಾಮಿ ವಿವೇಕಾನಂದರು ಅವನನ್ನು ಕೊಂಡಾಡುವರು. ಬೌದ್ಧಧರ್ಮವು ವಿಕೃತರೂಪವನ್ನು ತಾಳಿದಾಗ ಹುಟ್ಟಿಬಂದ ಶ್ರೀಶಂಕರಾಚಾರ್ಯರು, ಭರತಖಂಡವನ್ನು ಪ್ರಾಚೀನ ವಿಶುದ್ಧ ವೇದಮಾರ್ಗಕ್ಕೆ ತರಬೇಕೆಂದು ಸಂಕಲ್ಪ ಮಾಡಿದರು; ಅದರಲ್ಲಿ ಯಶಸ್ವಿಯಾದರು ಕೂಡ. ಅವರ ನಂತರ ಬಂದ ಶ್ರೀರಾಮಾನುಜಾಚಾರ್ಯರು ಸರ್ವೋಚ್ಚ ಆಧ್ಯಾತ್ಮಿಕತೆಯ ಬಾಗಿಲನ್ನು ಬ್ರಾಹ್ಮಣನಿಂದ ಹಿಡಿದು ಚಂಡಾಲನವರೆಗೆ, ಎಲ್ಲರಿಗೂ ತೆರೆದರು. ಇದೇ ಪಂಥಕ್ಕೆ ಸೇರಿದ ಬಂಗಾಳ ದೇಶದ ಶ್ರೀಕೃಷ್ಣ ಚೈತನ್ಯರು, ಪ್ರೇಮೋನ್ಮಾದಕ್ಕೆ ಆದರ್ಶರಾಗಿದ್ದಾರೆ. ಅವರ ಭಕ್ತಿತರಂಗ ಭೂಮಿಯ ಮೇಲೆಲ್ಲಾ ಹರಿಯಿತು; ಎಲ್ಲರಿಗೂ ಶಾಂತಿ ದೊರೆಯಿತು; ಎಲ್ಲರೂ ಆತನ ಪ್ರೇಮಕ್ಕೆ ಭಾಗಿಗಳಾಗಿದ್ದರು; ದಯೆಗೆ ಪಾತ್ರರಾಗಿದ್ದರು.

**ಈ ಪತ್ರಿಕೆಯ ಡಿಸೆಂಬರ್ ೨೦೧೨ರ ಸಂಚಿಕೆಯ ಸಂಪಾದಕೀಯದಲ್ಲಿ 'ಭಾರತ ಭಾಗ್ಯ ವಿಧಾತನ ಚೆನ್ನೈ ರಣಕಹಳೆ' ಎಂಬ ಹೆಸರಿನಲ್ಲಿ ಸ್ವಾಮಿ ವಿವೇಕಾನಂದರು ೧೮೯೭ರ ಫೆಬ್ರವರಿ ತಿಂಗಳಿನಲ್ಲಿ ಚೆನ್ನೈ ನಗರದಲ್ಲಿ ಮಾಡಿದ ಆರು ಭಾಷಣಗಳಲ್ಲಿ ಮೂರು ಭಾಷಣಗಳ ಪರಿಚಯವನ್ನು ಮಾಡಿಕೊಂಡಿದ್ದೆವು. ಇನ್ನುಳಿದ ಮೂರು ಐತಿಹಾಸಿಕ ಭಾಷಣಗಳ ಸಂಕ್ಷಿಪ್ತ ಪರಿಚಯವನ್ನು ಈ ಅಂಕಣದಲ್ಲಿ ಮಾಡಿ ಕೊಡುತ್ತಿದ್ದೇವೆ. ಇನ್ನು ಮುಂದೆ ಸ್ವಾಮಿ ವಿವೇಕಾನಂದರ ಕೃತಿಶ್ರೇಣಿಯ ಪರಿಚಯವು ಈ ಹೊಸ ಅಂಕಣದ ರೂಪದಲ್ಲಿ ಪ್ರತಿ ತಿಂಗಳೂ ಪ್ರಕಟವಾಗುತ್ತದೆ ಎಂದು ತಿಳಿಸಲು ಹರ್ಷಿಸುತ್ತೇವೆ.**

**- ಸಂ.**

ಶಂಕರರದು ಅದ್ಭುತ ಪ್ರತಿಭೆಯಾದರೆ, ರಾಮಾನುಜರದ್ದು ವಿಶಾಲಹೃದಯ. ಇವೆರಡೂ ಮಹಾನ್‌ಗುಣಗಳಿಂದ ಕೂಡಿದ ಒಬ್ಬ ಅದ್ಭುತ ಪುರುಷರು ಆಧುನಿಕ ಯುಗದಲ್ಲಿ ಹುಟ್ಟಿದರು. ಹೃದಯ ಮತ್ತು ಬುದ್ಧಿಗಳ ಸಾಮರಸ್ಯವನ್ನು ಸಾಧಿಸುವ ವಿಶ್ವಧರ್ಮವನ್ನು ಅವರು ಸ್ಥಾಪಿಸಿದರು. ಅವರೇ ಶ್ರೀರಾಮಕೃಷ್ಣ ಪರಮಹಂಸರು. ಭಾರತೀಯ ಮಹಾಪುರುಷರೆಲ್ಲರ ಪೂರ್ಣ ಪ್ರಕಾಶ ಸ್ವರೂಪರಾದ ಯುಗಾಚಾರ್ಯ ಶ್ರೀರಾಮಕೃಷ್ಣರಲ್ಲಿ, ಈಶ್ವರೀಯ ಶಕ್ತಿ ಈ ಆಧುನಿಕ ಕಾಲದಲ್ಲಿ ಕೆಲಸ ಮಾಡುತ್ತಿರುವುದು.

ಸ್ವಾಮೀಜಿ ಚೆನ್ನೈನಲ್ಲಿ ಮಾಡಿದ ಮುಂದಿನ ಪ್ರವಚನದ ಶೀರ್ಷಿಕೆ **'ನಮ್ಮ ಪ್ರಸ್ತುತ ಕರ್ತವ್ಯ'** ಎಂದು. ಭವ್ಯ ಭಾರತದ ನಿರ್ಮಾಣಕ್ಕೆ ಭಾರತೀಯರು, ಅದರಲ್ಲೂ ಯುವಜನರು ಕೈಗೊಳ್ಳಬೇಕಾದ ಕಾರ್ಯಪ್ರಣಾಳಿಯನ್ನು ಸ್ವಾಮೀಜಿ ಸ್ಪಷ್ಟರೂಪದಲ್ಲಿ ಈ ಪ್ರವಚನದಲ್ಲಿ ನಮ್ಮ ಮುಂದೆ ಇಡುತ್ತಾರೆ. ಯಾವುದೇ ಸಮಸ್ಯೆಯನ್ನು ಸಂಕುಚಿತ ದೃಷ್ಟಿಯಿಂದ ಪರಿಹರಿಸಲಾಗದು. ನಮ್ಮ ದೇಶದ ಅವನತಿಗೆ ಸಂಕುಚಿತ ದೃಷ್ಟಿ ಮತ್ತು ಸಂಕುಚಿತ ಕರ್ತವ್ಯ ಕ್ಷೇತ್ರ – ಇವೇ ಕಾರಣ. ಯೂರೋಪಿನ ನಾಗರಿಕತೆಗೆ ಕಾರಣವಾದ ಗ್ರೀಕರ ಮನಸ್ಸು ಸ್ವಾಭಾವಿಕವಾಗಿಯೇ ಬಹಿರ್ಮುಖವಾಗಿತ್ತು. ಹೀಗಾಗಿ ವಿಜ್ಞಾನಶಾಖೆಗಳು ಯೂರೋಪಿನಲ್ಲಿ ಬೆಳೆದವು. ಹಿಂದೂಗಳ ಮನಸ್ಸು ಅಂತರ್ಮುಖವಾದುದು. ಹಲವಾರು ಕ್ಷೇತ್ರಗಳಲ್ಲಿ ಪ್ರಗತಿಯನ್ನು ಕಂಡರೂ, ಮಹಮ್ಮದೀಯರ ಧಾಳಿಯ ನಂತರದ ದಿನಗಳಲ್ಲಿ, ಅವರಲ್ಲಿ ಅವನತಿಯನ್ನು ಕಾಣುತ್ತೇವೆ. ಹಿಂದಿನ ವಿಶಾಲಭಾವನೆ ನಾಶವಾಗಿ, ಸಂಕುಚಿತತೆ ಬೆಳೆದದ್ದನ್ನು ಗಮನಿಸುತ್ತೇವೆ. ಸ್ವಾಮೀಜಿಯವರ ಪ್ರಕಾರ, ಆಧುನಿಕ ಕಾಲದಲ್ಲಿ ಇಂದು ಭರತಖಂಡದ ನೆಲದ ಮೇಲೆ, ಪುರಾತನ ಗ್ರೀಕ್ ದೇಶವನ್ನು ಪುರಾತನ ಹಿಂದೂ ಸಂಧಿಸುತ್ತಿದ್ದಾನೆ. ಇದರ ಫಲವಾಗಿ ವಿಶಾಲಭಾವನೆಗಳನ್ನು ಕರಗತ ಮಾಡಿಕೊಂಡು, ವಿಸ್ತಾರಗೊಳ್ಳುವ ಮನೋಭಾವನೆ ನಮ್ಮಲ್ಲಿ ಮೂಡಬೇಕು ಎಂದು ಸ್ವಾಮೀಜಿ ಆಶಿಸುತ್ತಾರೆ. ನಾವು ಶ್ರೇಷ್ಠವಾದದ್ದನ್ನು ಎಲ್ಲರಿಂದಲೂ ಕಲಿಯಲು ಸಿದ್ಧರಿರಬೇಕು. ವಿಕಾಸವೇ ಜೀವನದ ಪ್ರಥಮ ಚಿಹ್ನೆಯಾಗಿದೆ, ಅದೇ ನಮ್ಮ ರಾಷ್ಟ್ರೀಯ ಜಾಗೃತಿಯ ಪ್ರತೀಕ ಎಂದು ಸ್ವಾಮೀಜಿ ಹೇಳುತ್ತಾರೆ.

ಅದೇ ರೀತಿ, ಯಾವುದೇ ಜನಾಂಗ ಬದುಕಿಬಾಳುವುದಕ್ಕೆ, ತನ್ನದೇನನ್ನಾದರೂ ಜಗತ್ತಿಗೆ ನೀಡಬೇಕು. ಭಾರತವು ನೀಡಬಹುದಾದ ಅಂತಹ ಕೊಡುಗೆ ಯಾವುದು? ಧರ್ಮ, ದರ್ಶನಗಳು, ಅಧ್ಯಾತ್ಮ, ವಿವೇಕ – ಇವೇ ಜಗತ್ತಿಗೆ ಭಾರತೀಯರ ಕೊಡುಗೆ. ಅವುಗಳ ಪ್ರಸಾರವು ಶಾಂತಿ ಮತ್ತು ಪ್ರೇಮ – ಈ ಮಾಧ್ಯಮಗಳ ಮೂಲಕವೇ ಆಗುತ್ತದೆಯೇ ಹೊರತು, ರಕ್ತಪಾತದಿಂದ ಅಲ್ಲ. ಭರತಖಂಡದ ಹಿರಿಮೆಯೇ ನಾವು ಬೇರೆ ಯಾರನ್ನೂ ಯುದ್ಧದಿಂದ ಗೆಲ್ಲಲು ಹೋಗದಿದ್ದುದ್ದು. ಆದರೂ ಇಡೀ ವಿಶ್ವದಾದ್ಯಂತ ನಮ್ಮ ಸಂದೇಶವು ಮೌನವಾಗಿ, ನಿಧಾನವಾಗಿ ಹರಡಿದೆ. ಶಾಂತಿ ಮೌನಗಳೇ ಭಾರತೀಯ ಚಿಂತನೆಯ ಮುಖ್ಯ ಲಕ್ಷಣಗಳು.

ಸ್ವಾಮೀಜಿಯವರ ಪ್ರಕಾರ, ಜಾಗೃತವಾದ ಮತ್ತು ತೇಜಸ್ವಿಯಾದ ರಾಷ್ಟ್ರೀಯ ಜೀವನಕ್ಕೆ ಅತ್ಯವಶ್ಯಕವಾದುದು, ಭಾರತೀಯ ಚಿಂತನೆಗಳಿಂದ ಜಗತ್ತನ್ನು ಗೆಲ್ಲುವುದು. ಆದರೆ ನಮ್ಮಲ್ಲೇ ಬೇರೂರಿರುವ ಕೆಲವು ಅನವಶ್ಯಕ ಮೂಢನಂಬಿಕೆಗಳಿಂದ ನಾವು ಪಾರಾಗಬೇಕೆಂಬ ಎಚ್ಚರಿಕೆಯನ್ನೂ ಸ್ವಾಮೀಜಿ ನೀಡುವರು.

ನಮ್ಮ ಧರ್ಮವು ಇಡೀ ಜಗತ್ತಿನಲ್ಲೆಲ್ಲಾ ಅತ್ಯಂತ ಶ್ರೇಷ್ಠವಾದುದು. ಏಕೆಂದರೆ ನಮ್ಮ ಧರ್ಮ ನಿಂತಿರುವುದು ವ್ಯಕ್ತಿಗಳ ಮೇಲೆ ಅಲ್ಲ, ಚಿರಂತನ ತತ್ತ್ವಗಳ ಮೇಲೆ. ಜಗತ್ತಿನಲ್ಲಿ ನಮ್ಮ ಶಾಸ್ತ್ರಗಳೇ ಹೆಚ್ಚು ಸುರಕ್ಷಿತವಾಗಿರುವ ಶಾಸ್ತ್ರಗಳು. ನಮ್ಮಲ್ಲಿ ದ್ವೈತ, ವಿಶಿಷ್ಟಾದ್ವೈತ ಮತ್ತು ಅದ್ವೈತಗಳೆಂಬ ಹಂತಗಳಿವೆ. ಮಾನವಕೋಟಿಯ ಮೇಲೆ ಕರುಣೆದೋರಿ, ಮುಕ್ತಿಗೆ ಹಲವು ಮೆಟ್ಟಲುಗಳನ್ನು ವೇದವು ತೋರುವುದು. ಅವುಗಳಲ್ಲಿ ಪರಸ್ಪರ ವಿರೋಧವಿಲ್ಲ. ಹೀಗಾಗಿ ಅವುಗಳಿಗಾಗಿ ನಾವು ಹೋರಾಡಬೇಕಾಗಿಲ್ಲ. ಹಾಗೆಯೇ ನಮ್ಮ ಧರ್ಮದ ವಿಷಯದಲ್ಲಿ ಜ್ಞಾಪಕದಲ್ಲಿಟ್ಟುಕೊಳ್ಳಬೇಕಾದ ಇನ್ನೊಂದು ಅಂಶವೆಂದರೆ ನಮ್ಮ ಧರ್ಮವು, ಸತ್ಯವು ಎಲ್ಲರಿಗೂ ದೊರಕಬಲ್ಲ ಸಂಗತಿಯೆಂಬುದನ್ನು ಸಾರಿ ಹೇಳುವುದು. ಅವಿಕಾರಿಯಾದುದನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವುದೇ ಧರ್ಮ. ಇದೇ ಎಲ್ಲರಿಗೂ ಧರ್ಮ. ಧರ್ಮವನ್ನು ಸಾಕ್ಷಾತ್ಕಾರ ಮಾಡಿಕೊಂಡಿರುವವರೇ ಋಷಿಗಳು. ಸಾಕ್ಷಾತ್ಕಾರವು ಯಾವುದೇ ನಿರ್ದಿಷ್ಟ ವ್ಯಕ್ತಿಯ ಸ್ವತ್ತಲ್ಲ. ಸ್ವಾಮೀಜಿ ಭಾವೀ ಜನಾಂಗಕ್ಕೆ ಹೀಗೆ ಕರೆಕೊಡುವರು: "ಹಿಂದಿನವರು ಮಹಾತ್ಮರು. ಆದರೆ ನಾವು ಅವರಿಗಿಂತ ಹೆಚ್ಚು ಮಹಾಪುರುಷರಾಗಬೇಕು... ಧೀರರೆಂದು ನೀವು ನಂಬಿದರೆ ಧೀರರಾಗುವಿರಿ. ಮಹಾಪುರುಷರೆಂದು ನಂಬಿದರೆ ಮಹಾ ಪುರುಷರಾಗುವಿರಿ. ನಿಮ್ಮನ್ನು ತಡೆಯುವುದು ಯಾವುದೂ ಇಲ್ಲ." ತಮ್ಮ ಜನಾಂಗದಲ್ಲಿರುವ ಆಧ್ಯಾತ್ಮಿಕ ಶಕ್ತಿಯನ್ನು ಪ್ರಕಟಗೊಳಿಸಿಕೊಳ್ಳುವಂತೆ ಭಾರತೀಯರಿಗೆ ಸ್ವಾಮೀಜಿ ಹೀಗೆ ಪ್ರೇರೇಪಿಸುವರು: "ಎಲ್ಲ ಶಕ್ತಿಯೂ ನಿಮ್ಮಲ್ಲಿ ಅಂತರ್ಗತವಾಗಿದೆ. ನೀವು ಏನನ್ನು ಬೇಕಾದರೂ ಮಾಡಬಹುದು; ಎಲ್ಲವನ್ನೂ ಮಾಡಬಹುದು; ಇದನ್ನು ನಂಬಿ. ನೀವು ದುರ್ಬಲರೆಂದು ನಂಬಬೇಡಿ. ಯಾರ ಆಸರೆಯೂ ಇಲ್ಲದೆ ಏನನ್ನು ಬೇಕಾದರೂ, ಎಲ್ಲವನ್ನೂ ನೀವು ಸಾಧಿಸಬಹುದು. ಅನಂತಶಕ್ತಿ ನಿಮ್ಮಲ್ಲಿರುವುದು. ನಿಮ್ಮಲ್ಲಿ ಅಂತರ್ಗತವಾಗಿರುವ ಪವಿತ್ರತೆಯನ್ನು ವ್ಯಕ್ತಗೊಳಿಸಿಕೊಳ್ಳಿ."

ಚೆನ್ನೈನಲ್ಲಿ ಸ್ವಾಮೀಜಿ ಮಾಡಿದ ಮುಂದಿನ ಭಾಷಣದ ಹೆಸರು **'ಭಾರತದ ಭವಿಷ್ಯ'** ಎಂದು. ಸ್ವಾಮೀಜಿ ಈ ಭಾಷಣದ ಆರಂಭದಲ್ಲಿಯೇ ಜಗತ್ತಿನ ದೇಶಗಳಲ್ಲಿ ಭಾರತದ ಶ್ರೇಷ್ಠತೆಯನ್ನು ತುಂಬು ಹೃದಯದಿಂದ ಹೀಗೆ ಕೊಂಡಾಡುತ್ತಾರೆ: "ಜಗತ್ತಿನಲ್ಲಿ ಜ್ಞಾನವು ಮೊಟ್ಟಮೊದಲು ಉದಯಿಸಿದ್ದು ಈ ಪುರಾತನ ಭೂಮಿಯಲ್ಲಿಯೇ... ಅವಿನಾಶಿಯಾದ ವೀರ್ಯದಿಂದ ಮತ್ತು ನಾಶಗೊಳಿಸಲು ಸಾಧ್ಯವೇ ಇಲ್ಲದ ಪ್ರಾಣಶಕ್ತಿಯಿಂದ ಹೇಗೆ ಅನಾದಿ ಅನಂತ ಅಮೃತ ಸ್ವರೂಪವಾಗಿದೆಯೋ, ಹಾಗೆಯೇ ನಮ್ಮ ಭಾರತ ಭೂಮಿ ಕೂಡ. ನಾವು ಅಂಥ ದೇಶದ ಸಂತಾನರು."

ನಮ್ಮ ದೇಶದ ಭೂತಕಾಲದ ವೈಭವದ ಚಿಂತನೆಯು ಭವಿಷ್ಯವನ್ನು ನಿರ್ಮಾಣ ಮಾಡಲು ನಮಗೆ ಪ್ರೇರಣೆಯನ್ನು ನೀಡಬಲ್ಲುದು, ನೀಡಬೇಕು. ಇತಿಹಾಸದುದ್ದಕ್ಕೂ ನಮ್ಮ ಏಕಮಾತ್ರ ಸಮಾನಭೂಮಿಕೆಯೆಂದರೆ, ಹಿಂದಿನಿಂದ ಬಂದ ಪವಿತ್ರ ಪರಂಪರೆ ಮತ್ತು ಧರ್ಮ. ಹೀಗಾಗಿ ಭವಿಷ್ಯ ಭಾರತದ ಸಂಘಟನೆಗೆ